ವಿ-72-(142)

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ಆರ್.ಪಾಟೀಲ ಇವರು ನಿಯಮ 72ರ ಅಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

**ಸೂಚನೆ :-**

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ತಿಮ್ಮಾಪುರದಲ್ಲಿರುವ ಏಕೈಕ ಸಹಕಾರಿ ಕಾರ್ಖಾನೆಯಾದ ರನ್ನ ನಗರದ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತವು ಈ ಮೊದಲು ಲಾಭದಾಯಕವಾಗಿ ನಡೆಯುತ್ತಿತ್ತು. ಪ್ರಸ್ತುತ ಈ ಕಾರ್ಖಾನೆಯು ಆಡಳಿತ ಮಂಡಳಿಯವರ ವಿವಿಧ ಧೋರಣೆಗಳಿಂದ ಆರ್ಥಿಕ ದುಸ್ಥಿತಿಗೆ ತಲುಪಿದೆ. ದಿನಾಂಕ 26.07.2021 ರಿಂದ ಇಲ್ಲಿಯವರೆಗೆ ಕಾರ್ಮಿಕರು ತಮಗೆ ಬರಬೇಕಾದ ಇನ್ನಿತರ ವೇತನ ಭತ್ಯೆಗಳ ಹಿಂಬಾಕಿಯನ್ನು ಪಾವತಿಸಲು ಕಳೆದ 142 ದಿನಗಳಿಂದ ಮುಷ್ಕರವನ್ನು ನಡೆಸುತ್ತಿದ್ದು, ಸರಕಾರವು ಯಾವುದೇ ರೀತಿಯ ಸ್ಪಂದನೆಯನ್ನು ತೋರಿಸದಿರುವ ಈ ವಿಚಾರದ ಬಗ್ಗೆ ಕಾರ್ಮಿಕ ಸಚಿವರ ಗಮನ ಸೆಳೆಯುತ್ತಿದ್ದೇನೆ.

**ಉತ್ತರ :-**

ಆಡಳಿತ ವರ್ಗದವರು ಪ್ರಸ್ತುತ ಸದರಿ ಸಂಸ್ಥೆಗೆ ಜನವರಿ 2021 ರಿಂದ ಲೇ-ಆಫ್ ಘೋಷಿಸಿದ್ದು, ಕಾರ್ಮಿಕ ಸಂಘದ ಪದಾಧಿಕಾರಿಗಳು 1947 ರ ಕೈಗಾರಿಕಾ ವಿವಾದ ಕಾಯ್ದೆಯಡಿ ನೇಮಕಗೊಂಡ ಸಂಧಾನಾಧಿಕಾರಿಗಳ ಬಳಿ ಲೇ-ಆಫ್ ಪರಿಹಾರಕ್ಕಾಗಿ ವಿವಾದ ದಾಖಲಿಸಬಹುದಾಗಿರುತ್ತದೆ.

ಸಂಸ್ಥೆಯ ಕಾರ್ಮಿಕರುಗಳಿಗೆ ಆಡಳಿತ ವರ್ಗದವರು ಬಾಕಿ ವೇತನ ಮತ್ತು ಇನ್ನಿತರ ಭತ್ಯೆಗಳು ಪಾವತಿಯಾಗದೇ ಇರುವುದು ಸರಕಾರದ ಗಮನಕ್ಕೆ ಬಂದಿರುತ್ತದೆ. ಕಾರ್ಮಿಕ ಸಂಘದವರ ದೂರಿನ ಮೇರೆಗೆ ಸಹಾಯಕ ನಿರ್ದೇಶಕರು, ಕಾರ್ಖಾನೆ ಇಲಾಖೆ ಇವರು ದಿನಾಂಕ 18.08.2021 &21-9-2020 ರಂದು ವೇತನ ಸಹಿತ ರಜಾ ಬಾಬ್ತು (ಇ.ಎಲ್), ಹೆಚ್ಚುವರಿ ಕೆಲಸಕ್ಕೆ ಹೆಚ್ಚುವರಿ ವೇತನ (ಓ.ಟಿ), ಬಾಕಿ ವೇತನಕ್ಕಾಗಿ ಸಲ್ಲಿಸಿದ ಕ್ಲೇಮ ಅರ್ಜಿ ಆಧಾರದ ಮೇರೆಗೆ ಈ ಕೆಳಕಂಡಂತೆ 1936ರ ವೇತನ ಪಾವತಿ ಕಾಯ್ದೆಯಡಿ ನೇಮಕಗೊಂಡ ಪ್ರಾಧಿಕಾರವಾದ ಉಪ ಕಾರ್ಮಿಕ ಆಯುಕ್ತರು, ಬೆಳಗಾವಿ ಪ್ರಾದೇಶಿಕ, ಬೆಳಗಾವಿ ಇವರು ಈ ಕೆಳಕಂಡಂತೆ ಕಾನೂನಾತ್ಮಕ ಕ್ರಮಗಳನ್ನು ಕೈಗೊಂಡಿರುತ್ತಾರೆ.

1. ರನ್ನ ಸಹಕಾರಿ ಸಕ್ಕರೆ ಕಾರ್ಖಾನೆ (ನಿ), ರನ್ನ ನಗರ, ಮುಧೋಳ, ಸಂಸ್ಥೆಯವರು ಕಾರ್ಮಿಕರುಗಳಿಗೆ 2020 ರ ಜೂನ್ ಮತ್ತು ಜುಲೈ ತಿಂಗಳುಗಳಲ್ಲಿ ಕೆಲಸ ಮಾಡಿದ 240 ಜನ ಕಾರ್ಮಿಕರುಗಳಿಗೆ ನಿಗದಿತ ಅವಧಿಯಲ್ಲಿ ವೇತನ ಪಾವತಿಸದೇ ಇರುವ ಕಾರಣ ಉಪ ಕಾರ್ಮಿಕ ಆಯುಕ್ತರು, ಬೆಳಗಾವಿ ಪ್ರಾದೇಶಿಕ, ಬೆಳಗಾವಿ ಇವರು 1936 ರ ವೇತನ ಪಾವತಿ ಕಾಯ್ದೆಯಡಿ ಕ್ಲೇಮ ಅರ್ಜಿಯ ವಿಚಾರಣೆ ನಡೆಸಿ ದಿನಾಂಕ 21.12.2020 ರಂದು ಆದೇಶ ಹೊರಡಿಸಿ ರೂ.54,01,579/- ಗಳನ್ನು ಪಾವತಿಸುವಂತೆ ಆಡಳಿತ ವರ್ಗಕ್ಕೆ ನಿರ್ದೇಶಿಸಿದ್ದು, ಆಡಳಿತ ವರ್ಗದವರು ರೂ.44,41,579/- ಗಳ ಮೊತ್ತವನ್ನು ಮಾತ್ರ ಕಾರ್ಮಿಕರುಗಳಿಗೆ ಪಾವತಿಸಿದ್ದು, ಬಾಕಿ ಆದೇಶಿತ ಮೊತ್ತ ರೂ.9,60,000/- ಗಳ ವಸೂಲಾತಿಗಾಗಿ ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ ಇವರಿಗೆ ಕಳುಹಿಸಲಾಗಿದೆ.

2. ಸದರಿ ಸಂಸ್ಥೆಯವರು ಕಾರ್ಮಿಕರುಗಳಿಗೆ ಡಿಸೆಂಬರ್ 2019 ರಿಂದ ಫೆಬ್ರುವರಿ 2020 ರ ಅವಧಿಗೆ ಸಂಬಂಧಿಸಿದಂತೆ 277 ಜನ ಕಾರ್ಮಿಕರುಗಳಿಗೆ ನಿಗದಿತ ಅವಧಿಯಲ್ಲಿ ಹೆಚ್ಚುವರಿ ಕೆಲಸದ ಹೆಚ್ಚುವರಿ ವೇತನ ಬಾಬ್ತು (ಓ.ಟಿ) ಪಾವತಿಸದೇ ಇರುವ ಕಾರಣ ಉಪ ಕಾರ್ಮಿಕ ಆಯುಕ್ತರು, ಬೆಳಗಾವಿ ಪ್ರಾದೇಶಿಕ, ಬೆಳಗಾವಿ ಇವರು 1936 ರ ವೇತನ ಪಾವತಿ ಕಾಯ್ದೆಯಡಿ ಕ್ಲೇಮ ಅರ್ಜಿಯ ವಿಚಾರಣೆ ನಡೆಸಿ ದಿನಾಂಕ 23.11.2021 ರಂದು ಆದೇಶ ಹೊರಡಿಸಿ ರೂ. 16,59,651/- ಗಳನ್ನು ಪಾವತಿಸುವಂತೆ ಆಡಳಿತ ವರ್ಗಕ್ಕೆ ನಿರ್ದೇಶನ ನೀಡಲಾಗಿರುತ್ತದೆ.

-2-

3. ಸದರಿ ಸಂಸ್ಥೆಯವರು ಕಾರ್ಮಿಕರುಗಳಿಗೆ 2016 ರಿಂದ 2018 ನೇ ಸಾಲಿಗೆ ಸಂಬಂಧಿಸಿದಂತೆ 188 ಜನ ಕಾರ್ಮಿಕರುಗಳಿಗೆ ನಿಗದಿತ ಅವಧಿಯಲ್ಲಿ ರಜಾ ವೇತನ ಬಾಬ್ತು (ಇ.ಎಲ್) ಪಾವತಿಸದೇ ಇರುವ ಕಾರಣ ಉಪ ಕಾರ್ಮಿಕ ಆಯುಕ್ತರು, ಬೆಳಗಾವಿ ಪ್ರಾದೇಶಿಕ, ಬೆಳಗಾವಿ ಇವರು 1936 ರ ವೇತನ ಪಾವತಿ ಕಾಯ್ದೆಯಡಿ ಕ್ಲೇಮ ಅರ್ಜಿಯ ವಿಚಾರಣೆ ನಡೆಸಿ ದಿನಾಂಕ 02.12.2021 ರಂದು ಆದೇಶ ಹೊರಡಿಸಿ ರೂ. 45,81,275/- ಗಳನ್ನು ಪಾವತಿಸುವಂತೆ ಆಡಳಿತ ವರ್ಗಕ್ಕೆ ನಿರ್ದೇಶನ ನೀಡಲಾಗಿರುತ್ತದೆ.

4. ಸದರಿ ಸಂಸ್ಥೆಯವರು ಕಾರ್ಮಿಕರುಗಳಿಗೆ 2020ರ ನವೆಂಬರ್, ಡಿಸೆಂಬರ್ ಮತ್ತು 2021 ರ ಜನೇವರಿ ತಿಂಗಳುಗಳಿಗೆ ಸಂಬಂಧಿಸಿದಂತೆ 240 ಜನ ಕಾರ್ಮಿಕರುಗಳಿಗೆ ನಿಗದಿತ ಅವಧಿಯಲ್ಲಿ ಬಾಕಿ ವೇತನ ಬಾಬ್ತು ಪಾವತಿಸದೇ ಇರುವ ಕಾರಣ ಉಪ ಕಾರ್ಮಿಕ ಆಯುಕ್ತರು, ಬೆಳಗಾವಿ ಪ್ರಾದೇಶಿಕ, ಬೆಳಗಾವಿ ಇವರು 1936 ರ ವೇತನ ಪಾವತಿ ಕಾಯ್ದೆಯಡಿ ಕ್ಲೇಮ ಅರ್ಜಿಯ ವಿಚಾರಣೆ ನಡೆಸಿ ದಿನಾಂಕ 06.11.2021 ರಂದು ಆದೇಶ ಹೊರಡಿಸಿ ರೂ. 1,13,68,333/- ಗಳನ್ನು ಪಾವತಿಸುವಂತೆ ಆಡಳಿತ ವರ್ಗಕ್ಕೆ ನಿರ್ದೇಶನ ನೀಡಲಾಗಿರುತ್ತದೆ.

5. ಸದರಿ ಸಂಸ್ಥೆಯವರು ಕಾರ್ಮಿಕರುಗಳಿಗೆ 2020ರ ಮಾರ್ಚ್ ನಿಂದ 2021 ರ ಜುಲೈ ತಿಂಗಳುಗಳಿಗೆ ಸಂಬಂಧಿಸಿದಂತೆ 157 ಜನ ಕಾರ್ಮಿಕರುಗಳಿಗೆ ನಿಗದಿತ ಅವಧಿಯಲ್ಲಿ ರಿಟೇನಿಂಗ್ ಭತ್ಯೆ ಪಾವತಿಸದೇ ಇರುವ ಕಾರಣ ಕಾರ್ಮಿಕ ಸಂಘದವರು ದಿನಾಂಕ 18.09.2021 ರಂದು 1936 ರ ವೇತನ ಪಾವತಿ ಕಾಯ್ದೆ ಅಡಿ ಕ್ಲೇಮ ಅರ್ಜಿ ಸಲ್ಲಿಸಿದ್ದು, ಸದರಿ ಪ್ರಕರಣವು ಉಪ ಕಾರ್ಮಿಕ ಆಯುಕ್ತರು, ಬೆಳಗಾವಿ ಪ್ರಾದೇಶಿಕ, ಬೆಳಗಾವಿ ಪ್ರಾಧಿಕಾರದಲ್ಲಿ ವಿಚಾರಣಾ ಹಂತದಲ್ಲಿರುತ್ತದೆ.

ಸಂಖ್ಯೆ: ಕಾಇ 120 ಎಲ್‌ಡಬ್ಲ್ಯೂಎ 2021

(ಅರಬೈಲ್ ಶಿವರಾಮ ಹೆಬ್ಬಾರ್)
**ಕಾರ್ಮಿಕ ಸಚಿವರು**